ಅನುಬಂಧ-3

ವಿವಿಧ ಸರ್ಕಾರಿ ರೇಷ್ಮೆ ಕಾರ್ಖಾನೆಗಳಿಂದ ರೇಷ್ಮೆ ಉದ್ಯಮಗಳ ವಿಭಾಗ, ಬೆಂಗೂರು ಇಲ್ಲಿ ಹುದ್ದೆ ಸಹಿತ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ವಿವರಗಳು

ಕ್ರಮ ಸಂಖ್ಯೆ	ನೌಕರರ ಹೆಸರು	ಪದನಾಮ	ನಿಯೋಜಿರಾದ ಕಾರ್ಖಾನೆಯ ಹೆಸರು	ನಿಯೋಜನೆ ಮೇರೆಗೆ ಕಾರ್ಯ ವರದಿ ಮಾಡಿಕೊಂಡ ದಿನಾಂಕ	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸಿದ ಅವಧಿ
1.	ಶ್ರೀ. ಮಹಮದ್ ಫಯಾಜ್	ಮುಖ್ಯಲಿಕ್ಕಿಗ	ಕೊಳ್ಳೇಗಾಲ	10-7-2000	ರೇಷ್ಮೆ ಉದ್ಯಮ ಕೋಶ	2 ವರ್ಷಗಳು 7 ತಿಂಗಳು
2.	ಶ್ರೀ. ಐ.ಎಂ.ವಾಲಿ	ಪ್ರಧಾನ ವ್ಯವಸ್ಥಾಪಕರು	ಚಾಮರಾಜ	28-3-2001	ರೇಷ್ಮೆ ಉದ್ಯಮ ಕೋಶ	1 ವರ್ಷ 8 ತಿಂಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗಣಿಗಾರಿಕೆ

394(368) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಗಣಿಗಾರಿಕೆ ನಡೆಯುತ್ತದೆ; ಇಲಾಖಾ ಮತಿಯಿಂದ ಯಾವ ಯಾವ ಗುತ್ತಿಗೆದಾರರಿಗೆ ಪರವಾನಗಿ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ. ಈ ಗಣಿಗಾರಿಕೆಗಳಿಂದ ಪ್ರತಿವರ್ಷ ಸರ್ಕಾರಕ್ಕೆ ಬರುವ ಆದಾಯವೆಷ್ಟು;

ಇ. ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೇವನಹಳ್ಳಿ ದೊಡ್ಡಬಳ್ಳಾಪುರ, ನೆಲಮಂಗಲ,, ಮಾಗಡಿ, ಹೊಸಕೋಟೆ, ಕನಕಪುರ, ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಗಣಿಗಾರಿಕೆ ನಡೆಸಲು ಗುತ್ತಿಗೆದಾರರಿಗೆ ಪರವಾನಿಗೆ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

ಆ. ಈ ಗಣಿಗಾರಿಕೆಗಳಿಂದ 2001-02ನೇ ಸಾಲಿನ ಅಂತ್ಯಕ್ಕೆ ರೂ. 877 ಲಕ್ಷ ರಾಜಸ್ವ ಆದಾಯ ಸಂಗ್ರಹವಾಗಿದೆ.

ಇ. ಬಂದಿದೆ. ಈ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ತಾಂತ್ರಿಕ ಅಧಿಕಾರಿಗಳು ಆಗಿಂದಾಗ್ಗೆ ಸದರಿ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದು, ಅಕ್ರಮ ಗಣಿಗಾರಿಕೆ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಅಲ್ಲಲ್ಲಿ ಇಲಾಖಾವತಿಯಿಂದ ತನಿಖಾ ಠಾಣೆಗಳನ್ನು ರಚಿಸಲಾಗಿದೆ. ಅಕ್ರಮ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡುತ್ತಿದ್ದವರಿಂದ 5 ಪಟ್ಟು ದಂಡ ವಸೂಲು ಮಾಡಲಾಗಿದೆ. ಹಾಗೂ ಅಕ್ರಮವಾಗಿ ತೆಗೆದ ಗ್ರಾನೈಟ್ ದಿಮ್ಮಿಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಅವುಗಳನ್ನು ಬಹಿರಂಗವಾಗಿ ಹರಾಜು ಮೂಲಕ ವಿಲೇ ಮಾಡಲಾಗಿದೆ. ಕೆಲವು ಪ್ರಕರಣಗಳಲ್ಲಿ ಅಕ್ರಮ ಗಣಿಗಾರಿಕೆಯನ್ನು ಸಕ್ರಮಗೊಳಿಸಲು ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ. ಕೆಲವು ಪ್ರಕರಣಗಳಲ್ಲಿ ಕ್ರಿಮಿನಲ್ ಕೇಸುಗಳನ್ನು ದಾಖಲಿಸಲಾಗಿದೆ. ಹಾಗೂ ಪೋಲೀಸ್ ಮತ್ತು ಕಂದಾಯ ಇಲಾಖೆಯ ಸಹಯೋಗದೊಂದಿದೆ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ, ಒಂದು ಸಂಚಾರ ತನಿಖಾ ದಳವನ್ನು ರಚಿಸಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಕಲ್ಲು ಗಣಿ ಗುತ್ತಿಗೆ	ಗಣಿ ಗುತ್ತಿಗೆ ಸಂಖ್ಯೆ
1.	ದೇವನಹಳ್ಳಿ	268	-
2.	ದೊಡ್ಡಬಳ್ಳಾಪುರ	62	03
3.	ನೆಲಮಂಗಲ	71	-
4.	ಮಾಗಡಿ	79	01
5.	ಹೊಸಕೋಟೆ	79	01
6.	ಕನಕಪುರ	181	-
7.	ರಾಮನಗರ	75	-
8.	ಚನ್ನಪಟ್ಟಣ	12	02
	ಒಟ್ಟು	827	07

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಪುನಃ ಶ್ಚೇತನ

395(370) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ. ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಸರ್ಕಾರದ ಕಾರ್ಯಕ್ರಮಗಳೇನು;

ಇ. ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಗೆ ಬಾಕಿ ನೀಡಬೇಕಾದ ಸಹಾಯಧನ ಮೊತ್ತವೆಷ್ಟು;

ಈ. ಈ ಬಾಕಿ ನೀಡಬೇಕಾದ ಸಹಾಯ ಧನವನ್ನು ಎಂದು ಬಿಡುಗಡೆ ಮಾಡಲಾಗುವುದು;

ಉ. ಇದರಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಸಣ್ಣ ಕೈಗಾರಿಕೆಗಳಿಗೆ ಬಾಕಿ ಇರುವ ಸಹಾಯಧನ ಮೊತ್ತವೆಷ್ಟು; ಯಾವಾಗ ಬಿಡುಗಡೆ ಮಾಡಲಾಗುವುದು?